## ರಾಯಭಾರ ಕಚೇರಿಯ ಕೋನ್ಸುಲರ್ ವಿಭಾಗದಲ್ಲಿ ಕರ್ನಾಟಕ ಗೋಡೆಗಳ ಉದ್ಘಾಟನೆಯ ಸಂದರ್ಭದಲ್ಲಿ ರಾಯಭಾರಿಗಳ ಟಿಪ್ಪಣಿ

## 16 ಏಪ್ರಿಲ್ 2024

## REMARKS BY AMBASSADOR ON THE OCCASION OF INAUGURATION OF KARNATAKA WALLS AT CONSULAR HALL OF THE EMBASSY

## 16 April 2024

ರಾಯಭಾರ ಕಚೇರಿಯ ಕೋನ್ಸುಲರ್ ವಿಭಾಗದಲ್ಲಿ ಕರ್ನಾಟಕದ ಪ್ರವಾಸಿ ತಾಣಗಳನ್ನು ಹಾಗು ವಿಶಿಷ್ಟವಾದ ಉತ್ಪನ್ನಗಳನ್ನು ಪ್ರತಿಬಿಂಬಿಸುವ ಗೋಡೆಯ ಉದ್ಘಾಟನೆಗೆ ನಾನು ನಿಮ್ಮೆಲ್ಲರನ್ನು ಸ್ವಾಗತಿಸುತಿದ್ದೇನೆ.

ಈ ಗೋಡೆಗಳು ಮುಂದಿನ ಒಂದು ಅಥವಾ ಎರಡು ತಿಂಗಳುಗಳ ಕಾಲ ಕರ್ನಾಟಕ ರಾಜ್ಯದ ಒಂದು ಜಿಲ್ಲೆ ಒಂದು ಉತ್ಪನ್ನ (ಓ ಡಿ ಓ ಪಿ) ಯೋಜನೆಯಡಿ ಗುರುತಿಸಲಾದ ಪ್ರವಾಸಿ ತಾಣಗಳನ್ನು ಮತ್ತು ವಿಶಿಷ್ಟವಾದ ಉತ್ಪನ್ನಗಳನ್ನು ಪ್ರದರ್ಶಿಸುತ್ತದೆ.

ನಿಮ್ಮೆಲ್ಲರಿಗೂ ತಿಳಿದಿರುವಂತೆ, ಈ ಯೋಜನೆಯು ಸಮಗ್ರ, ಸಾಮಾಜಿಕ, ಆರ್ಥಿಕ, ಬೆಳವಣಿಗೆಯನ್ನು ಸಕ್ರಿಯಗೊಳಿಸಲು ದೇಶದ ಪ್ರತಿ ಜಿಲ್ಲೆಯಿಂದ ಕನಿಷ್ಠ ಒಂದು ಉತ್ಪನ್ನವನ್ನು ಆಯ್ಕೆ, ಬ್ರಾಂಡ್ ಮತ್ತು ಪ್ರಚಾರ ಮಾಡುವ ಗುರಿಯನ್ನು ಹೊಂದಿದೆ.

ರಾಜಸ್ಥಾನ, ಕಾಶ್ಮೀರ ಮತ್ತು ಉತ್ತರ ಪ್ರದೇಶದ ನಂತರ ಕರ್ನಾಟಕವು ಕೋನ್ಸುಲರ್ ವಿಭಾಗದ, ಸ್ಟೇಟ್ ವಾಲ್ನಲ್ಲಿ ಪ್ರದರ್ಶಿಸಲ್ಪಡುವ ನಾಲ್ಕನೇ ಕೇಂದ್ರೀಕೃತ ರಾಜ್ಯವಾಗಿದೆ.

ಈ ವಿನೂತನ ಕಲ್ಪನೆ ಮತ್ತು ಅದರ ಅನುಷ್ಠಾನಕ್ಕಾಗಿ ರಾಯಭಾರ ಕಚೇರಿಯಲ್ಲಿರುವ ನನ್ನ ಸಹೋದ್ಯೋಗಿಗಳನ್ನು ವಿಶೇಷವಾಗಿ ಶ್ರೀ ರವಿ ಕುಮಾರ್ ಜೈನ್ ಅವರನ್ನು ನಾನು ಅಭಿನಂದಿಸುತ್ತೇನೆ.

ಕರ್ನಾಟಕದೊಂದಿಗೆ, ನಾವು ಬಹರೈನ್ನಲ್ಲಿ ನೆಲೆಸಿರುವ ಕೇಂದ್ರೀಕೃತ ರಾಜ್ಯದ ಸಮುದಾಯವನ್ನು ತೊಡಗಿಸಿಕೊಳ್ಳುವುದರ ಮೂಲಕ ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಓ ಡಿ ಓ ಪಿ ವಸ್ತುಗಳನ್ನು ಸಂಗ್ರಹಿಸುವಲ್ಲಿ ರಾಯಭಾರ ಕಚೇರಿಗೆ ಸಹಾಯ ಮಾಡಿದ್ದಕ್ಕಾಗಿ ನಾನು ಕನ್ನಡ ಸಂಘಕ್ಕೆ ಧನ್ಯವಾದ ಹೇಳುತ್ತೇನೆ. ಓ ಡಿ ಓ ಪಿ ವಸ್ತುಗಳನ್ನು ಒಂದು ತಿಂಗಳವರೆಗೆ ಪ್ರದರ್ಶಿಸಲಾಗುತ್ತದೆ.

ನಾವು ಮುಂದೆಯೂ ಕೂಡ ಇತರ ಭಾರತೀಯ ಸಂಘ ಸಂಸ್ಥೆಗಳನ್ನು ಓ ಡಿ ಓ ಪಿ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗಿಯಾಗಿಸುತ್ತೇವೆ.

ಕನ್ನಡ ಸಮುದಾಯದ ಸಾಂಸ್ಕೃತಿಕ ಪ್ರಸ್ತುತಿಯನ್ನು ನಾನು ಎದುರು ನೋಡುತಿದ್ದೇನೆ.
ಧನ್ಯವಾದಗಳು.